ವಿ-72-(190)

<u>ಕರ್ನಾಟಕ ವಿಧಾನ ಪರಿಷತ್</u>

<u>140ನೇ ಅಧಿವೇಶನ-2020</u>

| | |
|---|---|
| ಗಮನ ಸೆಳೆಯುವ ಸೂಚನೆ ಸಂಖ್ಯೆ | 190 |
| ಸೂಚನೆ ನೀಡಿದ ಸದಸ್ಯರ ಹೆಸರು | ಡಾ.ವೈ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ) |

<u>ವಿಷಯ</u>

ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು ಪ್ರಾರಂಭವಾದಾಗಿನಿಂದ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಒದಗಿಸಲಾದ ಜಮೀನು, ಅನುದಾನ ಸಮರ್ಪಕವಾಗಿ ಬಳಕೆಯಾಗದೇ ಅನಾವಶ್ಯಕ ಪೀಠೋಪಕರಣ ಹಾಗೂ ಪರೀಕ್ಷಾ ಕಾರ್ಯ ನಿರ್ವಹಣೆಗೆ ಅನಗತ್ಯ ತಂತ್ರಾಂಶವನ್ನು ಖರೀದಿಸಿ, ಸುಮಾರು ರೂ 30.00 ಕೋಟಿಗಳಷ್ಟು ಮೊತ್ತವನ್ನು ವಿಶ್ವವಿದ್ಯಾಲಯದ ಬೊಕಕಸಕ್ಕೆ ಅಪಾರ ನಷ್ಟ ಉಂಟು ಮಾಡಿರುವ ಗಂಬೀರ ವಿಷಯದ ಬಗ್ಗೆ

<u>ಸೂಚನೆಯ ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಹೇಳಿಕೆ</u>

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಸ್ಥಾಪನೆಗಾಗಿ ಚಿಕ್ಕಬಳ್ಳಾಪುರ ಜಿಲ್ಲೆಯ ಜಂಗಮಕೋಟೆ ಹೋಬಳಿಯ ಅಮರಾವತಿ ಗ್ರಾಮದ ಸ.ನಂ.47ರಲ್ಲಿನ ಮಂಜೂರು ಮಾಡಲಾಗಿರುವ 110.25 ಎಕರೆ ಜಮೀನಿನ ಹಾಗೂ 2016-17ನೇ ಸಾಲಿನಿಂದ 2019-20ನೇ ಆರ್ಥಿಕ ಸಾಲಿನವರೆಗೆ ಒದಗಿಸಲಾಗಿರುವ ಒಟ್ಟು ರೂ.27.45 ಕೋಟಿಗಳ ಅನುದಾನದ ಸಮರ್ಪಕ ಬಳಕೆಯ ನಿಟ್ಟಿನಲ್ಲಿ ವಿಶ್ವವಿದ್ಯಾಲಯವು ಕಾರ್ಯಪ್ರವೃತ್ತವಾಗಿರುತ್ತದೆ.

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವಿವಿಧ ವಿಭಾಗ/ಕಛೇರಿಗಳಿಗಾಗಿ 2018-19 ಹಾಗೂ 2019-20ನೇ ಸಾಲಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ಅದರಡಿ ರಚಿಸಲಾದ ನಿಯಮಗಳನ್ವಯ ಟೆಂಡರ್ ಪ್ರಕ್ರಿಯೆಯನ್ನು ಜರುಗಿಸಿ ಕನಿಷ್ಠ ಅವಶ್ಯಕತೆಗಳಿಗೆ ಅನುಗುಣವಾಗಿ ಮಾತ್ರ ರಾಜ್ಯ ಸರ್ಕಾರದ ಸ್ವಾಮ್ಯದ ಕರ್ನಾಟಕ ರಾಜ್ಯ ಕೈಗಾರಿಕಾ ಸರಬರಾಜು ಮತ್ತು ಮಾರಾಟ ಸಹಕಾರ ಮಂಡಳಿಯಿಂದ ಪೀಠೋಪಕರಣಗಳನ್ನು ಖರೀದಿಸಲಾಗಿದೆ. ಪೀಠೋಪಕರಣಗಳನ್ನು ಖರೀದಿಸಲು ವ್ಯಯಿಸಲಾಗಿರುವ ವೆಚ್ಚದ ಕಛೇರಿ/ವಿಭಾಗವಾರು ವಿವರಗಳನ್ನು ಈ ಕೆಳಕಂಡಂತೆ ತಃಖ್ತೀಕರಿಸಲಾಗಿದೆ.

| ಕ್ರ. ಸಂ | ವಿಭಾಗ/ಕಛೇರಿ | ವೆಚ್ಚ(ರೂ.ಗಳಲ್ಲಿ) |
|---|---|---|
| 1 | ಕುಲಪತಿಗಳ ಕಛೇರಿ, ಕೋಲಾರ | 5,75,400/- |
| 2 | ಕುಲಸಚಿವರ ಕಛೇರಿ, ಕೋಲಾರ | 5,35,600/- |
| 3 | ಕುಲಸಚಿವರು(ಮೌ) ಕಛೇರಿ, ಕೋಲಾರ | 4,84,500/- |
| 4 | ವಿತ್ತಾಧಿಕಾರಿಗಳ ಕಛೇರಿ, ಕೋಲಾರ | 4,25,400/- |
| 5 | ಶೈಕ್ಷಣಿಕ ವಿಭಾಗ, ಕೋಲಾರ | 12,97,134/- |
| 6 | ಭೌತಶಾಸ್ತ್ರ ಸ್ನಾತಕೋತ್ತರ ವಿಭಾಗ, ಕೋಲಾರ | 28,52,500/- |

--2

| | | |
|---|---|---|
| 7 | ಬೋಧಕರ ಕೋಠಡಿಗಳು ಮತ್ತು ತರಗತಿಗಳು, ಕೋಲಾರ | 38,15,767/- |
| 8 | ಸ್ನಾತ್ತಕೋತ್ತರ ಕೇಂದ್ರ ಮಂಗಸಂದ್ರ<br>ಅ) ಗ್ರಂಥಾಲಯ----------<br>ಬ)ಸಸ್ಯಶಾಸ್ತ್ರ ವಿಭಾಗ------- | <br>37,15,218/-<br>28,52,500/- |
| 9 | ವಿಶ್ವವಿದ್ಯಾಲಯ ಶಿಕ್ಷಣ ಕಾಲೇಜು, ಚಿಕ್ಕಬಳ್ಳಾಪುರ (ತರಗತಿಗಳು ಮತ್ತು ಗ್ರಂಥಾಲಯ) | 10,29,250/- |
| 10 | ಪ್ರಯೋಗಶಾಲೆ<br>ಅ) ಸಸ್ಯಶಾಸ್ತ್ರ(ಮಂಗಸಂದ್ರ)---<br>ಬ) ಭೌತಶಾಸ್ತ್ರ(ಕೋಲಾರ)---- | <br>3,20,623/-<br>2,52,573/- |
| | ಒಟ್ಟು | 1,81,56,466/- |

ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು ನೂತನ ವಿಶ್ವವಿದ್ಯಾಲಯವಾಗಿರುವ ಹಾಗೂ ಅಲ್ಲಿ ಶಾಶ್ವತ, ಅನುಭವಿ/ ಪರಿಣಿತ ಸಿಬ್ಬಂದಿ ಇರದ ಹಿನ್ನೆಲೆಯಲ್ಲಿ ಇತರೆ ವಿಶ್ವವಿದ್ಯಾಲಯಗಳು ಅಳವಡಿಸಿಕೊಂಡಿರುವ ಸಂಗ್ರಹಣೆ ಕ್ರಮವಿಧಾನವನ್ನು ಅನುಸರಿಸಿ, ಪರೀಕ್ಷಾ ಕಾರ್ಯದ ನಿರ್ವಹಣೆ ತಂತ್ರಾಂಶಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ಅದರಡಿ ರಚಿಸಲಾದ ನಿಯಮಗಳನ್ವಯ ಇ-ಟೆಂಡರ್ ಮೂಲಕ 5 ವರ್ಷಗಳ ಸೀಮಿತ ಅವಧಿಗೆ ಮಾತ್ರ ಕ್ರಮಬದ್ಧ ರೀತಿಯಲ್ಲಿ ಪಡೆಯಲಾಗುತ್ತಿದ್ದು, ಈ ತಂತ್ರಾಂಶ ಸಂಗ್ರಹಣೆಗಳಿಗೆ ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು ರೂ 45, 75, 979 ಗಳನ್ನು ಭರಿಸಬೇಕಾಗುತ್ತದೆ.

ವಿಶ್ವವಿದ್ಯಾಲಯದ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಪ್ರಕಾರ್ಯಗಳ ನಿರ್ವಹಣೆಗೆ ಕನಿಷ್ಠ ಅಗತ್ಯವಾದ ಪೀಠೋಪಕರಣಗಳನ್ನು ಮಾತ್ರ ಖರೀದಿಸಿರುವ ಹಾಗೂ ಕಾಲಮಿತಿಯೊಳಗೆ ಪರೀಕ್ಷಾ ಪ್ರಕಾರ್ಯಗಳ ನಿರ್ವಹಣೆಗೆ ಅವಶ್ಯಕವಾದ ಪರೀಕ್ಷಾ ಕಾರ್ಯದ ನಿರ್ವಹಣೆ ತಂತ್ರಾಂಶಗಳನ್ನು ಸಂಗ್ರಹಿಸಿರುವ ಮತ್ತು ಈ ಖರೀದಿ/ಸಂಗ್ರಹಣೆ ಕಾರ್ಯಗಳನ್ನು ಪಾರದರ್ಶಕವಾಗಿ ಕೆ.ಟಿ.ಪಿ.ಪಿ ಅಧಿನಿಯಮದನ್ವಯ ಟೆಂಡರ್ ಮೂಲಕ ಜರುಗಿಸಿರುವ ಮೇರೆಗೆ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಬೊಕ್ಕಸಕ್ಕೆ ಹೆಚ್ಚುವರಿ ಆರ್ಥಿಕ ಹೊರೆಯಾಗಲೀ ಅಥವಾ ನಷ್ಟವಾಗಲೀ ಉಂಟಾಗಿರುವುದಿಲ್ಲ.

(ಡಾ॥ ಅಶ್ವತ್ಥನಾರಾಯಣ ಸಿ.ಎನ್)

ಉಪಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)

ಇಡಿ/ 70 /ಯುಬಿವಿ/2020